# ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ-577007
ದೂರವಾಣಿ ಸಂಖ್ಯೆ:08192-208029, ಫ್ಯಾಕ್ಸ್:08192-208008

ಃ ವಿದ್ಯಾದಾನೇನ ವರ್ಧತೆ, ವಿದ್ಯಾ ವಿನಯೇನ ಶೋಭತೆ, ವಿದ್ಯಯಾ ವಿಂಧತೆ ಅಮೃತಂ ಃ

**ಸಂಖ್ಯೆ:ದಾವಿವಿ/ಶೈ/76/2022-23**/1081 **ದಿನಾಂಕ:20.06.2022**

## :ಸುತ್ತೋಲೆ:

**ವಿಷಯ:** ವಿಶ್ವವಿದ್ಯಾನಿಲಯದ 2022-23ನೇ ಶೈಕ್ಷಣಿಕ ಸಾಲಿನ ವಿವಿಧ ಸ್ನಾತಕ ಪದವಿಗಳ ಪ್ರವೇಶಾತಿ ಕುರಿತು.

**ಉಲ್ಲೇಖ:**
1. ಸರ್ಕಾರದ ಅಧೀನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಪತ್ರ ಸಂ:ಇಡಿ 34 ಇಜಿಒವಿ 2020 (ಭಾಗ-2), ಬೆಂಗಳೂರು ದಿನಾಂಕ:13.06.2022.
2. ದಾವಿವಿ ಕಛೇರಿ ಸುತ್ತೋಲೆ ಸಂ:ದಾವಿವಿ/ಶೈ/76/2022-23/1003 ದಿನಾಂಕ:14.06.2022.
3. ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು ಇವರ ಪತ್ರ ಸಂ:ಕಾಶಿಇ/ಶೈವಿ/36/ ಪ್ರವೇಶಾತಿ ಮಾರ್ಗಸೂಚಿ/2022-23 ದಿನಾಂಕ:18.06.2022.
4. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:20.06.2022

******

ವಿಶ್ವವಿದ್ಯಾನಿಲಯ ವ್ಯಾಪ್ತಿಯ ಎಲ್ಲಾ ಸ್ನಾತಕ ಪದವಿ ಕಾಲೇಜುಗಳಿಗೆ ಹಾಗೂ ಘಟಕ ಕಾಲೇಜುಗಳಲ್ಲಿ ವಿವಿಧ ಸ್ನಾತಕ ಪದವಿಗಳ ಪ್ರವೇಶಾತಿಗೆ ಸಂಬಂಧಿಸಿದಂತೆ - ಪ್ರಾಂಶುಪಾಲರುಗಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ – **ಸಮಗ್ರ ವಿಶ್ವವಿದ್ಯಾನಿಲಯ ಮತ್ತು ಕಾಲೇಜು ನಿರ್ವಹಣ ವ್ಯವಸ್ಥೆ(UUCMS)** ಯಡಿ ಆನ್‌ಲೈನ್ ಮುಖಾಂತರ ಅರ್ಜಿಗಳನ್ನು ಆಹ್ವಾನಿಸಿ ಪ್ರವೇಶಾತಿ ಪ್ರಕ್ರಿಯೆಯನ್ನು **(UUCMS)** ತಂತ್ರಾಂಶದ ಮೂಲಕವೇ ಕೈಗೊಳ್ಳತಕ್ಕದ್ದು.

### :2022-23ನೇ ಶೈಕ್ಷಣಿಕ ಸಾಲಿನ ಪ್ರವೇಶಾತಿ ಪ್ರಕ್ರಿಯೆಗೆ ಅನುಸರಿಸಬೇಕಾದ ಕ್ರಮಗಳು:

1. ಸ್ನಾತಕ ಪದವಿಗಳ ಪ್ರವೇಶಾತಿಯನ್ನು **ದಿನಾಂಕ:27.06.2022** ರಿಂದ ಪ್ರಾರಂಭಿಸಿ **ದಿನಾಂಕ:30.07.2022** ರವರೆಗೆ ಕೈಗೊಳ್ಳುವಂತೆ ಸೂಚಿಸಲಾಗಿದೆ.
2. ಪ್ರವೇಶಾತಿಗೆ ದಿನಾಂಕ ಹಾಗೂ ಶೈಕ್ಷಣಿಕ ವೇಳಾಪಟ್ಟಿಯ ನಿಗದಿಪಡಿಸುವಿಕೆ ಕುರಿತಂತೆ ಸರ್ಕಾರ/ಉನ್ನತ ಶಿಕ್ಷಣ ಇಲಾಖೆಯಿಂದ ಮುಂಬರುವ ಆದೇಶಗಳನುಸಾರ ಕ್ರಮಕೈಗೊಳ್ಳಲಾಗುವುದು.
3. ವಿಶ್ವವಿದ್ಯಾನಿಲಯಕ್ಕೆ ಸರ್ಕಾರದಿಂದ ಕಾಲ ಕಾಲಕ್ಕೆ ಸ್ವೀಕೃತಗೊಳ್ಳುವ ಯುಯುಸಿಎಂಎಸ್ **(UUCMS)** ತಂತ್ರಾಂಶದ ನಿಯಮಗಳನ್ನು ವಿಶ್ವವಿದ್ಯಾನಿಲಯದ ವೆಬ್‌ಸೈಟ್ (davangereuniversity.ac.in) ನಲ್ಲಿ ಪ್ರಕಟಿಸಲಾಗುವುದು.
4. ಪ್ರಾಂಶುಪಾಲರುಗಳು ಕಾಲೇಜಗಳ ಹಂತದಲ್ಲಿ ಪ್ರವೇಶಾತಿ ಸಮಿತಿಯನ್ನು ರಚಿಸಿಕೊಂಡು ಸದರಿ ಸಮಿತಿಯಲ್ಲಿ **ಹೆಲ್ಪ್ ಡೆಸ್ಕ್** ಸ್ಥಾಪಿಸಿ ವಿದ್ಯಾರ್ಥಿ ಸ್ನೇಹಿ ಸಿಬ್ಬಂದಿಯನ್ನು ನೇಮಕ ಮಾಡಿಕೊಂಡು ಪ್ರವೇಶಾತಿ ಕೋರುವ ವಿದ್ಯಾರ್ಥಿಗಳಿಗೆ/ಪೋಷಕರಿಗೆ ಅಗತ್ಯ ಮಾರ್ಗದರ್ಶನ ದೊರಕುವಂತೆ ಕ್ರಮವಹಿಸುವುದು.

5. ವಿಶ್ವವಿದ್ಯಾನಿಲಯದ ಹೆಲ್ಪ್ ಡೆಸ್ಕ್ (Help Desk) ಸಿಬ್ಬಂದಿಯ ವಿವರ: ಶ್ರೀ ರಮೇಶ್ ಎಸ್.ಕೆ., ಮೊಬೈಲ್ ಸಂಖ್ಯೆ:7353076792 - **(UUCMS)** ತಂತ್ರಾಂಶದ ಬಳಕೆ ಕುರಿತು ಕಛೇರಿ ವೇಳೆಯಲ್ಲಿ (ಬೆಳಿಗ್ಗೆ 10:00 ಗಂಟೆಯಿಂದ ಸಂಜೆ 5:30 ರೊಳಗಾಗಿ) ಸಂಪರ್ಕಿಸಬಹುದಾಗಿದೆ.
6. 2022-23ನೇ ಶೈಕ್ಷಣಿಕ ಸಾಲಿನ ವಿವಿಧ ಸ್ನಾತಕ ಪದವಿ ಕೋರ್ಸುಗಳ ಪ್ರವೇಶ ಶುಲ್ಕ ತಃಖ್ತೆಯನುಸಾರ ಶುಲ್ಕ ಭರಿಸಿಕೊಳ್ಳುವಂತೆ ಸೂಚಿಸಲಾಗಿದೆ.
7. 2022-23ನೇ ಶೈಕ್ಷಣಿಕ ಸಾಲಿನಲ್ಲಿ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಂದ ಪ್ರತ್ಯೇಕವಾಗಿ ಪಾವತಿಸಿಕೊಳ್ಳಲಾಗುವ **ರೂ.390/-**ಗಳನ್ನು ಅದೇ ಉದ್ದೇಶಗಳಿಗಾಗಿ ಬಳಸಿಕೊಳ್ಳಲಾಗಿದೆಯೆಂದು **'ಉಪಯುಕ್ತತಾ ಪ್ರಮಾಣ ಪತ್ರ'**ವನ್ನು ಶೈಕ್ಷಣಿಕ ಶಾಖೆಗೆ ಹಾಗೂ ಹಣಕಾಸು ಶಾಖೆಗೆ ತಪ್ಪದೇ ಸಲ್ಲಿಸತಕ್ಕದ್ದು. (ಆಯಾ ಶೈಕ್ಷಣಿಕ ವರ್ಷಗಳ ಆಡಿಟ್ ವಿಚಾರಣಾ ಸಂದರ್ಭದಲ್ಲಿ ಸದರಿ ವಿಷಯವು ಪ್ರಸ್ತಾಪವಾಗಿದೆ)
8. ಕಾಲೇಜುಗಳ ಪ್ರಾಂಶುಪಾಲರೇ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಿ ಹಾಗೂ ತಮ್ಮ ಕಾಲೇಜಿಗೆ ವಿಶ್ವವಿದ್ಯಾನಿಲಯದಿಂದ ನಿಗದಿಪಡಿಸಲಾಗಿರುವ **ಪ್ರವೇಶ ಮಿತಿ**ಯೊಳಗೆ ಅರ್ಹ ವಿದ್ಯಾರ್ಥಿಗಳಿಗೆ ಪ್ರವೇಶಾತಿ ನೀಡತಕ್ಕದ್ದು.
9. 2022-23ನೇ ಶೈಕ್ಷಣಿಕ ಸಾಲಿನ ವೇಳಾಪಟ್ಟಿಯನ್ನು ನಂತರದಲ್ಲಿ ಪರಿಚಲಿಸಲಾಗುವುದು.

ಆದೇಶಾನುಸಾರ

ಕುಲಸಚಿವರು.
ದಾವಣಗೆರೆ ವಿಶ್ವವಿದ್ಯಾನಿಲಯ
ಶಿವಗಂಗೋತ್ರಿ, ದಾವಣಗೆರೆ-577007

**ಗೆ,**

1. ವಿಶ್ವವಿದ್ಯಾನಿಲಯದ ಸಂಲಗ್ನಗೊಂಡ ಎಲ್ಲಾ ಸ್ನಾತಕ ಕಾಲೇಜುಗಳ ಪ್ರಾಂಶುಪಾಲರುಗಳಿಗೆ,
2. ಪ್ರಾಂಶುಪಾಲರು, ವಿಶ್ವವಿದ್ಯಾನಿಲಯದ ದೃಶ್ಯಕಲಾ ಮಹಾವಿದ್ಯಾಲಯ, ದಾವಣಗೆರೆ.
3. ಸಂಯೋಜನಾಧಿಕಾರಿಗಳು, ವಿಶ್ವವಿದ್ಯಾನಿಲಯ ಘಟಕ ಕಾಲೇಜು, ತುರುವನೂರು.

**ಪ್ರತಿ:**

1. ವಿಶ್ವವಿದ್ಯಾನಿಲಯದ ಮಾನ್ಯ ಸಿಂಡಿಕೇಟ್/ವಿದ್ಯಾವಿಷಯಕ ಪರಿಷತ್ತಿನ ಸದಸ್ಯರುಗಳಿಗೆ ಮಾಹಿತಿಗಾಗಿ ಕಳುಹಿಸಿದೆ.
2. ಕುಲಸಚಿವರು(ಪರೀಕ್ಷಾಂಗ), ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
3. ಹಣಕಾಸು ಅಧಿಕಾರಿಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
4. ನಿರ್ದೇಶಕರುಗಳು, ಸಿ.ಡಿ.ಸಿ/ದೈಹಿಕ ಶಿಕ್ಷಣ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
5. ಉಪಕುಲಸಚಿವರು/ಸಹಾಯಕ ಕುಲಸಚಿವರು/ಅಧೀಕ್ಷಕರು, ಶೈಕ್ಷಣಿಕ/ಸಿಡಿಸಿ ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ.
6. ಸಂಯೋಜನಾಧಿಕಾರಿಗಳು, ರಾಷ್ಟ್ರೀಯ ಸೇವಾ ಯೋಜನೆ ಘಟಕ, ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ.
7. ಸಾರ್ವಜನಿಕ ಸಂಪರ್ಕ ಅಧಿಕಾರಿಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
8. ಆಪ್ತ ಕಾರ್ಯದರ್ಶಿಗಳು, ಮಾನ್ಯ ಕುಲಪತಿಗಳು/ಕುಲಸಚಿವರ ಕಾರ್ಯಾಲಯ, ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ.
9. ಕಛೇರಿ ಪ್ರತಿ/ಹೆಚ್ಚುವರಿ ಪ್ರತಿ.

## ಅನುಬಂಧ–1

1. 2022–23ನೇ ಶೈಕ್ಷಣಿಕ ಸಾಲಿನ ಸ್ನಾತಕ ಪದವಿ ಪ್ರವೇಶಕ್ಕೆ ಸಂಬಂಧಪಟ್ಟ ಈ ಕೆಳಕಂಡ ಅನುಮತಿ ಪತ್ರಗಳ ಪಡೆಯಲು ವಿದ್ಯಾರ್ಥಿಗಳಿಂದ ನಿಗದಿತ ಅರ್ಜಿಯನ್ನು ಭರ್ತಿ ಮಾಡಿಸಿ ಅಗತ್ಯ ದಾಖಲೆಗಳೊಂದಿಗೆ ವಿಶ್ವವಿದ್ಯಾನಿಲಯದ ಈ–ಮೇಲ್ ವಿಳಾಸಕ್ಕೆ ಕಳುಹಿಸತಕ್ಕದ್ದು.

| ಪ್ರವೇಶಾತಿ ಕೋರುವ ವಿಷಯಗಳು | ನಿಗದಿಪಡಿಸಲಾದ ಶುಲ್ಕ |
|---|---|
| ❖ ಅನುಮತಿ/ಅರ್ಹತಾ ಪ್ರಮಾಣ ಪತ್ರ | ರೂ.690/– |
| ❖ ಮರು ಪ್ರವೇಶ | ರೂ.690/– |
| ❖ ಕಾಲೇಜು ಬದಲಾವಣೆ | ರೂ.690/– |
| ❖ ಅಂತರ ವಿಶ್ವವಿದ್ಯಾನಿಲಯ ಬದಲಾವಣೆ (ಬೆಸ ಸೆಮಿಸ್ಟರ್‌ಗಳಲ್ಲಿ ಮಾತ್ರ) | ರೂ.690/– |

dvgaca2020@davangereuniversity.ac.in – For Davangere District Colleges

ctaaca2020@davangereuniversity.ac.in – For Chitradurga District Colleges

2. ಸ್ನಾತಕ ಪದವಿ ಪ್ರವೇಶ ಸಂದರ್ಭಗಳಲ್ಲಿ ಮೇಲ್ಕಂಡ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಅನುಮತಿ ಪಡೆಯಲು ಬಯಸುವ ವಿದ್ಯಾರ್ಥಿಗಳ ಮೂಲ/ಜೆರಾಕ್ಸ್ ಅಂಕಪಟ್ಟಿ ಪ್ರಮಾಣ ಪತ್ರಗಳನ್ನು ಸ್ಕ್ಯಾನ್ (Scan) ಮಾಡಿ ಆಯಾ ಕಾಲೇಜಿನ ಪ್ರಾಂಶುಪಾಲರ ಈ–ಮೇಲ್ ವಿಳಾಸಕ್ಕೆ ಕಳುಹಿಸತಕ್ಕದ್ದು.
3. ಸದರಿ ಕಾಲೇಜಿನ ಸಂಬಂಧಪಟ್ಟ ಪ್ರಾಂಶುಪಾಲರು/ವಿಷಯ ನಿರ್ವಾಹಕರು ವಿದ್ಯಾರ್ಥಿಗಳಿಂದ ಸ್ವೀಕೃತಗೊಂಡ Scanned Documents ಗಳನ್ನು ವಿಶ್ವವಿದ್ಯಾನಿಲಯದ ಈ ಮೇಲ್ಕಂಡ ಈ–ಮೇಲ್ ವಿಳಾಸಕ್ಕೆ ಕಳುಹಿಸತಕ್ಕದ್ದು.
4. ವಿಶ್ವವಿದ್ಯಾನಿಲಯದಿಂದ Scanned Documents ಗಳ ಪರಿಶೀಲಿಸಿ ಮರು ಈ–ಮೇಲ್ ಮೂಲಕ ಅರ್ಹ ವಿದ್ಯಾರ್ಥಿಗಳ ಪಟ್ಟಿಯನ್ನು ಕಳುಹಿಸಿದ ನಂತರ ವಿದ್ಯಾರ್ಥಿಗಳಿಂದ ವಿಶ್ವವಿದ್ಯಾನಿಲಯದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, **ಖಾತೆ ಸಂ:64050447113, IFSC:SBIN0040869** ಗೆ ಶುಲ್ಕವನ್ನು ಪಾವತಿಸತಕ್ಕದ್ದು/ಜಮಾ ಮಾಡಿಸತಕ್ಕದ್ದು.
5. ಕಾಲೇಜುವಾರು ವಿದ್ಯಾರ್ಥಿಗಳ **ಅನುಮತಿ ಪತ್ರ**ಗಳನ್ನು ಆಯಾ ಕಾಲೇಜಿನ ಈ–ಮೇಲ್ ವಿಳಾಸಕ್ಕೆ ಕಳುಹಿಸಲಾಗುವುದು.
6. ಕೋವಿಡ್–19 (ಕೋರೋನಾ ವೈರಸ್) ನಿಯಂತ್ರಿಸುವ ಪ್ರಯುಕ್ತ ವಿದ್ಯಾರ್ಥಿಗಳು/ಪೋಷಕರು ಪ್ರವೇಶಾತಿ ಸಂದರ್ಭದಲ್ಲಿ ಸಾಮಾಜಿಕ ಅಂತರ ಕಾಯ್ದುಕೊಳ್ಳುವುದು ಮಾಸ್ಕ್ ಮತ್ತು ಸಾನಿಟೈಸರ್ ಕಡ್ಡಾಯವಾಗಿ ಬಳಸುವ ಬಗ್ಗೆ ಅರಿವು ಮೂಡಿಸಲು ತಿಳಿಸಲಾಗಿದೆ.

ಕುಲಸಚಿವರು
ದಾವಣಗೆರೆ ವಿಶ್ವವಿದ್ಯಾನಿಲಯ
ಶಿವಗಂಗೋತ್ರಿ, ದಾವಣಗೆರೆ-577007